ದಿ: 19-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ಎಂ.ಜೆ.ಎಸ್ ರವರಿಂದ

**11)** ದಿನಾಂಕ 22-02-2014ರ ವಿಭಾಗ ಪತ್ರವನ್ನು ತಯಾರಿಸಲು ನನ್ನ ತಾಯಿಯಾದ ಮಂಜಿ ಪೂಜಾರ್ತಿಯವರು ಮಾಹಿತಿ ನೀಡಿರುತ್ತಾರೆ. ಸಮಷ್ಟಿ ಹಕ್ಕಿನ ಆಸ್ತಿಗಳು ಎಂದರೆ ಏನು ಎನ್ನುವುದು ನನಗೆ ಗೊತ್ತಿಲ್ಲ. ವಾದಿಯರು ಸಮಷ್ಟಿ ಅಳಿಯ ಸಂತಾನ ಕುಟುಂಬದ ಬಗ್ಗೆ ದಾವೆಯಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ.

**ಪ್ರಶ್ನೆ** : ನಿ.ಡಿ-4 ಆಗುವಾಗ ವಾದಿಯರು ದಾವೆಯಲ್ಲಿ ಹೇಳಿಕೊಂಡ ಸಮಷ್ಟಿ ಅಳಿಯ ಸಂತಾನ ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಇದ್ದರು?

**ಉತ್ತರ** : ನಮ್ಮ ಕುಟುಂಬದ ಸದಸ್ಯರ ಸಂಖ್ಯೆ ಎಷ್ಟು ಎಂದು ನನಗೆ ಗೊತ್ತಿದೆ.

**12)** ನಿ.ಡಿ-4 ಆಗುವಾಗ 1 ಮತ್ತು 2ನೇ ವಾದಿಗಳು ವಯಸ್ಕರಾಗಿದ್ದರು ಎಂದರೆ ಸರಿ. ನಿ.ಡಿ-4ನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ನಾನಾಗಲಿ ಅಥವಾ ಇತರೇ ಪಕ್ಷಗಾರರು 1 ಮತ್ತು 2ನೇ ವಾದಿಗಳ ಗಮನಕ್ಕೆ ತಂದಿರುವುದಿಲ್ಲ ಎಂದರೆ ಸರಿ. ನಿ.ಡಿ-4ನ್ನು ತಯಾರಿಸಲು ನಮ್ಮ ತಾಯಿ ಮಾಹಿತಿ ನೀಡಿಲ್ಲ ಮತ್ತು ಅದನ್ನು ನನ್ನ ಮಾಹಿತಿಯ ಮೇರೆಗೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ.

**13)** ನಿ.ಡಿ-5ನ್ನು ನಾನು ಮತ್ತು ನನ್ನ ಪತ್ನಿ ಶಾಮೀಲಾಗಿ ಮೋಸದಿಂದ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ-5 ಸಹ ಜಾರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನಿ.ಡಿ-4 ಮತ್ತು 5ರಲ್ಲಿರುವ ಆಸ್ತಿಗಳು ವಾದಿಗಳು ಮತ್ತು 1 ರಿಂದ 7ನೇ ಪ್ರತಿವಾದಿಗಳ ಸಮಷ್ಟಿ ಅಳಿಯ ಸಂತಾನ ಕುಟುಂಬದ ಜಂಟಿ ಸ್ವಾಧೀನಾಭುವದಲ್ಲಿವೆ ಎಂದರೆ ಸುಳ್ಳು. ನಾನು ಒಟ್ಟು ಕುಟುಂಬದ ವಿದ್ಯಾವಂತನಾಗಿ ಒಟ್ಟು ಕುಟುಂಬದ ಇತರೇ ಸದಸ್ಯರ ಮೇಲಿನ ಹತೋಟಿಯಿಂದ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**14)** ದಾವಾ ಆಸ್ತಿ ಸಂಖ್ಯೆ 25 ಮತ್ತು 26 ದಾವಾ ಆಸ್ತಿ ಸಂಖ್ಯೆ 17ಕ್ಕೆ ಹೊಂದಿಕೊಂಡಂತೆ ಇವೆ ಎಂದರೆ ಸರಿ. 17ನೇ ದಾವಾ ಆಸ್ತಿಯು ಖದೀಂ ವರ್ಗದ ಆಸ್ತಿ ಎಂದರೆ ಸರಿ. 25 ಮತ್ತು 26ನೇ ದಾವಾ ಆಸ್ತಿಗಳು 17ನೇ ದಾವಾ ಆಸ್ತಿಗೆ ಕುಮ್ಕಿ ಜಮೀನುಗಳಾಗಿದ್ದವು ಎಂದರೆ ಸರಿಯಲ್ಲ. ವಾದಿ ಮತ್ತು 1

ರಿಂದ 7ನೇ ಪ್ರತಿವಾದಿಗಳ ಸಮಷ್ಟಿ ಕುಟುಂಬದ ಸದಸ್ಯನಾಗಿ ನಾನು 25 ಮತ್ತು 26ನೇ ದಾವಾ ಆಸ್ತಿಗಳ ಮೇಲೆ ದರ್ಖಾಸ್ತು ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-32ನ್ನು ನನ್ನ ವೈಯುಕ್ತಿಕ ಮಾಹಿತಿಯ ಮೇರೆಗೆ ನೀಡಿರುತ್ತೇನೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಕುಟುಂಬದ ಕೆಲವು ಸದಸ್ಯರು ತಕರಾರು ಸಲ್ಲಿಸಿದ್ದರು. ತಕರಾರು ಸಲ್ಲಿಸಿದ ನಂತರ 25 ಮತ್ತು 26ನೇ ದಾವಾ ಆಸ್ತಿಗಳ ಮಂಜೂರಾತಿಗಾಗಿ ಸಮಷ್ಟಿ ಕುಟುಂಬದ ಪರವಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದು ಮನವಿ ನೀಡಿರುವುದಿಲ್ಲ. ನನ್ನ ಮನವಿಯ ಮೇರೆಗೆ ಆಕ್ಷೇಪಣೆಯನ್ನು ಪರಿಗಣಿಸದೇ ಕುಟುಂಬದ ಪರವಾಗಿ ನನ್ನ ಹೆಸರಿನಲ್ಲಿ 25 ಮತ್ತು 26ನೇ ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. 25 ಮತ್ತು 26ನೇ ದಾವಾ ಆಸ್ತಿಗಳು ವಾದಿ ಮತ್ತು 1 ರಿಂದ 7ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಜಂಟಿ ಸ್ವಾಧೀನಾನುಭಾವದಲ್ಲಿ ಇದೆ ಎಂದರೆ ಸರಿಯಲ್ಲ. 25 ಮತ್ತು 26ನೇ ದಾವಾ ಆಸ್ತಿಗಳು ಕುಮ್ಕಿ ಆಸ್ತಿಗಳಾಗಿದ್ದರಿಂದ ನನ್ನ ಹೆಸರಿಗೆ ಮಂಜೂರಾಗಿವೆ ಎಂದರೆ ಸರಿಯಲ್ಲ.

**15)** ಪುಟ್ಟ ಪೂಜಾರಿ ಹಳ್ಳಿಗ ಎಂದರೆ ಹಳ್ಳಿಯಲ್ಲಿ ಹುಟ್ಟಿದವರು. ಪುಟ್ಟ ಪೂಜಾರಿ ತನ್ನ ಜೀವಿತ ಕಾಲದಲ್ಲಿ ಸಮಷ್ಟಿ ಅಳಿಯ ಸಂತಾನ ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಪುಟ್ಟ ಪೂಜಾರಿಗೆ ಅವರ ಸಮಷ್ಟಿ ಅಳಿಯ ಸಂತಾನ ಕುಟುಂಬದ ಸದಸ್ಯರ ಮೇಲೆ ಪ್ರೀತಿ ಮತ್ತು ವಿಶ್ವಾಸ ಇತ್ತು ಎಂದರೆ ಗೊತ್ತಿಲ್ಲ.

**16)** ಪುಟ್ಟ ಪೂಜಾರಿ ಬರೆದಿದ್ದಾರೆ ಎಂದು ಹೇಳುವ ವಿಲುನಾಮೆಯ ಸಂದರ್ಭದಲ್ಲಿ ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸುಳ್ಳು. ಸದರಿ ವಿಲುನಾಮೆ ನಾನು ಮತ್ತು ನನಗೆ ಬೇಕಾದವರು ಸೇರಿಕೊಂಡು ಮೋಸದಿಂದ ತಯಾರಿಸಿದ ದಾಖಲೆ ಎಂದರೆ ಸುಳ್ಳು. ಪುಟ್ಟ ಪೂಜಾರಿ ಯಾವುದೇ ವಿಲುನಾಮೆಯನ್ನು ಬರೆದಿಲ್ಲ ಮತ್ತು ಬರೆಯುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ಆಗಿದೆ ಎಂದು ಹೇಳುವ ಸಂದರ್ಭದಲ್ಲಿ ಅವರ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದರೆ

ಸರಿಯಲ್ಲ. ಸದರಿ ವಿಲುನಾಮೆಯ ಆಸ್ತಿಗಳು ಸಮಷ್ಟಿ ಅಳಿಯ ಸಂತಾನ ಕುಟುಂಬದ ಆಸ್ತಿಗಳಾಗಿದ್ದರಿಂದ ಪುಟ್ಟ ಪೂಜಾರಿಗೆ ವಿಲುನಾಮೆ ಬರೆಯುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

**17)** 9ನೇ ಪ್ರತಿವಾದಿಯಾದ ಸುಮತಿ ನನ್ನ ಹೆಂಡತಿಯ ಅಕ್ಕನ ಮಗಳು. 8ನೇ ಪ್ರತಿವಾದಿ ಜಲಜ ನನ್ನ ಹೆಂಡತಿ ಮತ್ತು ಆಕೆ ಬೇರೆ ಜಾತಿಯವಳಿದ್ದು ನಾನು ಆಕೆಯನ್ನು ಪ್ರೀತಿಸಿ ವಿವಾಹವಾಗಿದ್ದೇನೆ ಎಂದರೆ ಸರಿ. ನಾನು ಬೇರೆ ಜಾತಿಯವಳನ್ನು ಮದುವೆಯಾಗಿದ್ದರಿಂದ ಪುಟ್ಟ ಪೂಜಾರಿ, ನನ್ನ ತಾಯಿ ಮಂಜಿ ಮತ್ತು ಕುಟುಂಬದ ಇತರೇ ಸದಸ್ಯರು ನನ್ನನ್ನು ದ್ವೇಷಿಸುತ್ತಿದ್ದರು ಎಂದರೆ ಸರಿಯಲ್ಲ. 8 ಮತ್ತು 9ನೇ ಪ್ರತಿವಾದಿಗಳು ದಾವಾ ಆಸ್ತಿಗಳ ಯಾವುದೇ ಭಾಗದಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸಮಷ್ಟಿ ಅಳಿಯ ಸಂತಾನ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ 8 ಮತ್ತು 9ನೇ ಪ್ರತಿವಾದಿಗಳ ಪರವಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9ನೇ ಪ್ರತಿವಾದಿಗಳ ಪರವಾಗಿ ಬರೆದುಕೊಟ್ಟಿರುವ ದಾಖಲೆಗಳು ಆಚಾರಣೆಗೆ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲಿನ ಆಸ್ತಿಗಳು ವಾದಿ ಮತ್ತು 1 ರಿಂದ 7ನೇ ಪ್ರತಿವಾದಿಗಳ ನಡುವೆ ವಿಭಾಗವಾಗತಕ್ಕ ಆಸ್ತಿಗಳು ಎಂದರೆ ಸರಿಯಲ್ಲ. ಪಾಲು ಮಾಡುವುದನ್ನು ತಡಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**